ಇ) ಮೇಲ್ಕಂಡ ಯೋಜನೆಗಳನ್ನು ಯಾವ ಯಾವ ಗ್ರಾಮಗಳಲ್ಲಿ ಕೈಗೆತ್ತಿಕೊಳ್ಳಲಾಗುವುದು?

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಮತ್ತು ಪಶುಸಂಗೋಪನ ಮಂತ್ರಿಗಳು).—

ಅ) ನಾಗಮಂಗಲ ತಾಲ್ಲೂಕಿನಲ್ಲಿ ಇದುವರೆವಿಗೆ ೨೪ ಕಿರು ನೀರು ಸರಬರಾಜು ಯೋಜನೆಗಳನ್ನು ೯ ಎನ್.ಆರ್.ಡಬ್ಲ್ಯೂ.ಎಸ್ ಯೋಜನೆಗಳನ್ನು ಮತ್ತು ೩ ಎಆರ್.ಡಬ್ಲ್ಯೂ.ಎಸ್ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಆ) ೧೯೯೦-೯೧ರ ಸಾಲಿನ ಅನುಬಂಧ-೨ ಮತ್ತು ಕ್ರಿಯಾ ಯೋಜನೆಗಳು ತಯಾರಿಕೆಯ ಹಂತದಲ್ಲಿ ಇದ್ದು ಅನುಬಂಧ-೨ ಯನ್ನು ಸದನದಲ್ಲಿ ಮಂಡಿಸಲಾಗುವುದು.

ಇ) ೧೯೯೦-೯೧ರ ಸಾಲಿನ ಅನುಬಂಧ-೨ ಮತ್ತು ಕ್ರಿಯಾ ಯೋಜನೆ ಮಂಜೂರಾದ ಮೇಲೆ ಗ್ರಾಮಗಳ ವಿವರಗಳನ್ನು ತಿಳಿಸಲಾಗುವುದು.

ಶ್ರೀ ಎಲ್.ಆರ್. ಶಿವರಾಮೇಗೌಡ.— ಮಾನ್ಯ ಸಭಾಧ್ಯಕ್ಷರೇ, ಈಗ ಸಚಿವರು ತಿಳಿಸಿದ ಹಾಗೆ ನಮ್ಮ ತಾಲ್ಲೂಕಿನಲ್ಲಿ ಇದುವರೆಗೆ ೨೪ ಕಿರು ನೀರು ಸರಬರಾಜು ಯೋಜನೆಗಳನ್ನು ೯ ಎನ್.ಆರ್.ಡಬ್ಲ್ಯೂ.ಎಸ್. ಯೋಜನೆಗಳನ್ನು ಮತ್ತು ೩ ಎ.ಆರ್.ಡಬ್ಲ್ಯೂ.ಎಸ್. ಯೋಜನೆಗಳನ್ನು ಕೈಗೆತ್ತಿಕೊಂಡಿದ್ದಾರೆ. ೪೯೬ ಹಳ್ಳಿಗಳು ಇರತಕ್ಕ ನನ್ನ ತಾಲ್ಲೂಕಿನಲ್ಲಿ ಕೇವಲ ೩೩ ಹಳ್ಳಿಗಳಿಗೆ ನೀರು ಒದಗಿಸಿದರೆ ಇನ್ನು ೨ ಸಾವಿರ ಇಸವಿಯಾದರೂ ಉಳಿದ ಹಳ್ಳಿಗಳಿಗೆ ನೀರು ಸರಬರಾಜು ಮಾಡುವ ದಕ್ಕಾಗುವುದಿಲ್ಲ. ಗ್ರಾಮೀಣಾಭಿವೃದ್ಧಿ ಸಚಿವರು ನಮ್ಮ ಜಿಲ್ಲೆಗೆ ಬಂದಿದ್ದಾಗ ಕಿರು ನೀರು ಸರಬರಾಜು ಯೋಜನೆ ಗ್ರಾಮಾಂತರ ನೀರು ಸರಬರಾಜು ಯೋಜನೆ ಬಗ್ಗೆ ರಾಜ್ಯ ಸರ್ಕಾರದಲ್ಲಿ ಏನು ನಾವು ನ ಇವೆ ತಿಳಿಸಿ ಅದಲಾವಣೆ ಮಾಡಬೇಕು ಎಂದು ಕೇಳಿದ್ದೆವು. ಜನಸಂಖ್ಯೆ ಆಧಾರದ ಮೇಲೆ ಈ ಕೆಲಸ ಮಾಡತಕ್ಕದು ಏನಾದರೂ ಪರಿಶೀಲನೆಯಲ್ಲಿದೆಯೇ?

ಶ್ರೀ ಬಿ. ಬಸವಲಿಂಗಪ್ಪ — ಮುಂದಿನ ವರ್ಷ ಈ ಯೋಜನೆ ಪ್ರಕಾರ ನಿಮ್ಮ ಕ್ಷೇತ್ರಕ್ಕೆ ಎಷ್ಟು ಅವಶ್ಯಕತೆ ಇದೆ ಎಂಬುದನ್ನು ಪರಿಶೀಲನೆ ಮಾಡಿ ಮಂಜೂರು ಮಾಡೋಣ.

ಶ್ರೀ ಎಲ್. ಆರ್. ಶಿವರಾಮೇಗೌಡ.— ನನ್ನ ತಾಲ್ಲೂಕಿನಲ್ಲಿ...

ಅಧ್ಯಕ್ಷರು.— ಅದು ಅಷ್ಟು ಪ್ರಾಮುಖ್ಯವಾದ ವಿಚಾರವಾದರೆ, ನೀವು ಶೂನ್ಯ ನಿಯಮದ ಪ್ರಕಾರ ಅರ್ಧ ಗಂಟೆ ಚರ್ಚೆಗೆ ಸೂಚನೆ ಕಳುಹಿಸಿಕೊಡಿ.

ಹಾಸನ ಜಿಲ್ಲೆಯ ಶಾಂತಿಗ್ರಾಮ ಪಶುವೈದ್ಯ ಸಹಾಯಕ ಶಸ್ತ್ರ ಚಿಕಿತ್ಸಕ ಹುದ್ದೆಯ ಸ್ಥಳಾಂತರ

೮೨. ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ).— ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಮತ್ತು ಪಶುಸಂಗೋಪನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಾಸನ ತಾಲ್ಲೂಕಿನ ಶಾಂತಿ ಗ್ರಾಮದ ಪಶುವೈದ್ಯ ಶಾಲೆಗೆ ಮಂಜೂರಾಗಿರುವ ವೆಟರಿನರಿ ಅಸಿಸ್ಟೆಂಟ್ ಸರ್ಜನ್ ಹುದ್ದೆಯನ್ನು ಬೇರೆ ಸ್ಥಳಕ್ಕೆ ಸ್ಥಳಾಂತರಿಸಲು ಕಾರಣಗಳೇನು?

ಆ) ಇದರಿಂದ ಶಾಂತಿ ಗ್ರಾಮದ ಸುತ್ತಮುತ್ತಲಿನ ಗ್ರಾಮಗಳ ರೈತರುಗಳಿಗೆ ಹಾಗೂ ಜಾನುವಾರುಗಳಿಗೆ ತೊಂದರೆ ಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್ ಮತ್ತು ಪಶುಸಂಗೋಪನಾ ಸಚಿವರು).—

ಅ) ಸರ್ಕಾರಿ ಆದೇಶ ಸಂಖ್ಯೆ. ಎಫ್‌ಡಿ ೫೫ ಬಿಜಿಎಲ್ ೮೪ ದಿನಾಂಕ ೧೩-೧೨-೮೪ರಲ್ಲಿರುವಂತೆ ಇಲಾಖೆಯ ಯೋಜನೆ, ಯೋಜನೇತರ ಹುದ್ದೆಗಳ ಹೊಂದಾಣಿಕೆ ಸಂದರ್ಭದಲ್ಲಿ ಶಾಂತಿಗ್ರಾಮ ಪಶುವೈದ್ಯ ಶಾಲೆಯ ಪಶುವೈದ್ಯರ ಹುದ್ದೆಯನ್ನು ಸ್ಥಳಾಂತರಿಸಲಾಗಿದೆ.

ಆ) ಬಂದಿದೆ.

೧೨-೦೦ ಮಧ್ಯಾಹ್ನ

ಶ್ರೀ ಕೆ. ಹೆಚ್. ಹನುಮೇಗೌಡ.—ಸ್ವಾಮಿ, ೧೯೭೫ರಲ್ಲಿ ಆ ಭಾಗದ ರೈತರಿಗೆ ತೊಂದರೆಯಾಗಿರುವುದನ್ನು ಸರ್ಕಾರದ ಗಮನಕ್ಕೆ ನಾನು ತಂದಾಗ ಅಲ್ಲಿಗೆ ಪಶುವೈದ್ಯ ಆಫೀಕಾರಿಯ ಹುದ್ದೆಯನ್ನು ಮಂಜೂರು ಮಾಡಿ ತುಂಬಲಾಯಿತು. ಅಲ್ಲಿ ಸುತ್ತಮುತ್ತಲಿನ ೧೫ ಮೈಲಿ ವಿಸ್ತೀರ್ಣದಲ್ಲಿ ಪಶುವೈದ್ಯ ಇಲಾಖೆಯ ವೈದ್ಯರು ಹಾಗೂ ಆಸ್ಪತ್ರೆ ಇರುವುದಿಲ್ಲ. ಅಲ್ಲಿ ಇದರ ಆವಶ್ಯಕತೆ ಇದೆ ಎಂದು ಫೋಸ್ಟ್ ಫಿಲ್ ಅಪ್ ಮಾಡಿದಮೇಲೆ ಮತ್ತೆ ಬೇರೆ ಕಡೆಗೆ ವರ್ಗಾವಣೆ ಮಾಡಿದ್ದಕ್ಕೆ ಕಾರಣ ಏನು ಸ್ವಾಮಿ ?

ಶ್ರೀ ಬಿ. ಬಸವಲಿಂಗಪ್ಪ.—ಹಲವಾರು ಕಾರಣ ಇದ್ದ ಬಗ್ಗೆ ನಾನು ಹೇಳಿದ್ದೇನೆ. ಆದರೆ ಶಾಂತಿ ಗ್ರಾಮಕ್ಕೆ ಈ ಹುದ್ದೆ ಬೇಕು ಎಂದಿದ್ದಾರೆ. ಮತ್ತು ವರ್ಗಾವಣೆ ಮಾಡಿದ್ದು ತಪ್ಪು ಎಂದು ಹೇಳಿದ್ದಾರೆ ಪುನಃ ಅಲ್ಲಿಗೆ ಈ ಹುದ್ದೆಯನ್ನು ಕೊಡುತ್ತೇನೆ.

ಶ್ರೀ ಕೆ. ಹೆಚ್. ಹನುಮೆಗೌಡ.—ತಕ್ಷಣ ಕೊಡುತ್ತೀರಾ?

ಅಧ್ಯಕ್ಷರು.—ತಕ್ಷಣ ಕೊಡುತ್ತಾರೆ.

ಚೊಕ್ಕೆ ಪ್ರಶ್ನೆ ೧೮೬

ಅಧ್ಯಕ್ಷರು.—ಮಾನ್ಯ ವಾಟಾಳ್ ನಾಗರಾಜ್ ಅವರೇ, ನಿಮ್ಮ ಪ್ರಶ್ನೆಯನ್ನು ಸಂಬಂಧಪಟ್ಟ ಮಂತ್ರಿಗಳಿಗೆ ವರ್ಗಾವಣೆ ಮಾಡಲಾಗಿದೆ. ಈಗ ಶ್ರೀ ಎಂ. ನಾರಾಯಣಸ್ವಾಮಿ ಅವರು ತಮ್ಮ ಪ್ರಶ್ನೆಯನ್ನು ಕೇಳಬೇಕು.

ಶ್ರೀ ವಾಟಾಳ್ ನಾಗರಾಜ್.—ಮುಂದಿನ ಮಂಗಳವಾರ ರಜಾ ಇದೆ. ಆದ್ದರಿಂದ ನನ್ನ ಪ್ರಶ್ನೆ ಯಾವತ್ತು ಬರಬಹುದಂ? ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಯನ್ನು ತಾವು ವರ್ಗಾವಣೆ ಮಾಡಿದ್ದೀರಿ. ಮತ್ತೆ ಇದು ಯಾವಾಗ ಬರುತ್ತದೆ? ಇದು ಬಹಳ ಪ್ರಾಮುಖ್ಯವಾದ ಪ್ರಶ್ನೆ. ಈ ಪ್ರಶ್ನೆ ಚಾಮರಾಜನಗರದ ಗಡಿಯ ವಿಷಯಕ್ಕೆ ಸಂಬಂಧಪಟ್ಟದ್ದು. ಈ ಬಗ್ಗೆ ನಾನು ಕಳಕಳಿಯಿಂದ ಮನವಿ ಮಾಡಿದ್ದೇನೆ ಈ ಪ್ರಶ್ನೆಯನ್ನು ಮುಖ್ಯಮಂತ್ರಿಯವರಿಗೆ ವರ್ಗಾವಣೆ ಮಾಡಿದ್ದೀರಿ ಮುಂದಿನ ಮಂಗಳವಾರ ರಜಾ ಇರುವುದರಿಂದ ಮತ್ತೆ ಈ ಪ್ರಶ್ನೆ ಸದನದಲ್ಲಿ ಯಾವಾಗ ಬರಂತ್ತದೆಂದು ತಾವು ತಿಳಿಸಬೇಕು.

ಅಧ್ಯಕ್ಷರು.—ಮುಂದಿನ ಸಾರಿ, ತಾವು ಗ್ರಾಮಾಭಿವೃದ್ಧಿ, ಪಂಚಾಯತ್‌ರಾಜ್ ಹಾಗೂ ಪಶುಸಂಗೋಪನ ಮಂತ್ರಿಗಳಿಗೆ ಈ ಪ್ರಶ್ನೆ ಕೇಳಿದ್ದೀರಿ, ಆದರೆ ಇದು ನಮಗೆ ಬರುವುದಿಲ್ಲವೆಂದು ಸಚಿವರು ತಿಳಿಸಿದ್ದಾರೆ. ಹಾಗೂ ಇದು ಮುಖ್ಯಮಂತ್ರಿಯವರಿಗೆ ಸಂಬಂಧಪಟ್ಟ ಪ್ರಶ್ನೆ ಎಂದು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಇದು ಬಹಳ ಸುಲಭದ ಪ್ರಶ್ನೆ. ಇಲ್ಲಿ ನಮ್ಮ ಪ್ರಶ್ನೆಗಳಿಗೆ ಉತ್ತರ ಬರುವುದೇ ಅದೃಷ್ಟ, ಅದರಲ್ಲೂ ತಮ್ಮಿಂದ ಉತ್ತರ ಪಡೆಯುವುದು ಪರತ್ತೊಂದು ಅದೃಷ್ಟ ಈ ಪ್ರಶ್ನೆ ಮತ್ತೆ ಯಾವಾಗ ಬರಬಹುದು? ಬಹಳ ಶೋಚನೀಯ ಪರಿಸ್ಥಿತಿಯಿಂದ ನಾನು ಹೇಳುತ್ತಿದ್ದೇನೆ. ಈ ತಾಲ್ಲೂಕಿನ ಬಗ್ಗೆ ಪ್ರಶ್ನೆಗಳು ಬರುವುದೇ ಕಷ್ಟ, ಮುಂದಿನ ಮಂಗಳವಾರ ರಜಾ ಬರುತ್ತದೆ. ಆದ್ದರಿಂದ ಈ ಪ್ರಶ್ನೆಗಳಿಗೆ ಉತ್ತರ ಬರಲು ಇನ್ನೂ ೧ ಅಥವಾ ೨ ತಿಂಗಳು ಆಗಬಹುದು.

ಅಧ್ಯಕ್ಷರು.—ಯಾವಾಗ ಬರುತ್ತದೆಂದು ನಾನು ಹೇಳುವುದಕ್ಕೆ ಬರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ಅಧ್ಯಕ್ಷರೇ, ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ. ನಮ್ಮ ಚಾಮರಾಜನಗರ ಗಡಿ ತಾಲ್ಲೂಕು ಆಗಿದ್ದು ಅತ್ಯಂತ ಹಿಂದುಳಿದಿರ ತಕ್ಕ ತಾಲ್ಲೂಕು ಆಗಿದೆ. ಈ ತಾಲ್ಲೂಕಿನ ಪ್ರಶ್ನೆ ಬಗ್ಗೆ ನಾನು ಸರ್ಕಾರಕ್ಕೆ ನಿಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತಿದ್ದೇನೆ. ಇಂತಹ ಪ್ರಶ್ನೆಗಳು ಬರತಕ್ಕದ್ದು ಬಹಳ ಅಪರೂಪವಾಗಿದೆ. ಈ ಪ್ರಶ್ನೆಯ ಬಗ್ಗೆ ತಮ್ಮ ಮೂಲಕ ಸರ್ಕಾರವನ್ನು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತಿದ್ದೇನೆ. ತಾವು ಇದರ ಬಗ್ಗೆ ದಯಮಾಡಿ ಸಮಜಾಯಿಷಿಯನ್ನು ಕೊಡಬೇಕು. ಹಿಂದುಳಿದ ತಾಲ್ಲೂಕಿನ ಅಭಿವೃದ್ಧಿ ಬಗ್ಗೆ ಸರ್ಕಾರಕ್ಕೆ ಕೇಳಿದ್ದೇನೆ, ಸರ್ಕಾರದಲ್ಲೂ ಕೂಡಾ.....

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆ ನಮ್ಮ ಇಲಾಖೆಗೆ ಬರುವುದಿಲ್ಲ ಇದು ಮುಖ್ಯಮಂತ್ರಿಗಳ ಇಲಾಖೆಗೆ ಬರತಕ್ಕದ್ದು ಇದೆ. ಆದಷ್ಟು ಬೇಗ ತಮ್ಮ ಪ್ರಶ್ನೆಗೆ ಉತ್ತರ ಬರಲಿಕ್ಕೆ ಪ್ರಯತ್ನ ಮಾಡುತ್ತೇನೆ.